ಶ್ರೀ ಎ. ಜಿ. ರಾಮಚಂದ್ರರಾವ್.—ಇದ್ದಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅವರಲ್ಲಿ ಯಾರು ಜವಾಬ್ದಾರರು ?

ಶ್ರೀ ಎ. ಜಿ. ರಾಮಚಂದ್ರರಾವ್.—Official ಸೆಕ್ರೆಟರಿಯವರು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಹಿಂದೆ ಒಬ್ಬರೇ ಸೆಕ್ರೆಟರಿಯವರಿದ್ದುದು ಜ್ಞಾಪಕವಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈಗ ಮೂರು ಜನರನ್ನೇಕೆ ಮಾಡಿದ್ದೀರಿ ?

Sri A. G. RAMACHANDRA RAO.—For the more efficient management of the Exhibition.

ಶ್ರೀ ಎಂ. ಚಿಕ್ಕಲಿಂಗಯ್ಯ.—ಕೆಲಸ ಇಲ್ಲದಿರುವುದರಿಂದ ಕೆಲಸ ಕೊಡಿಸುವುದಕ್ಕಾಗಿ ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೆಲಸ ಹೆಚ್ಚಾಗಿದೆಯೆಂದು ಮಾಡಿದ್ದೇವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಯಾವ ವಿಷಯದಲ್ಲಿ ಕೆಲಸ ಹೆಚ್ಚಾಗಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನಾನು ಮೊದಲೇ ಹೇಳಿದ ಹಾಗೆ, ಅಕೌಂಟ್ಸ್ ಬಾರದೆ ಇದ್ದುದರಿಂದ ಹೆಚ್ಚಿಗೆ ಪ್ರಯತ್ನಪಟ್ಟು ತರಿಸಬೇಕಾಗಿತ್ತು. ಇದರಿಂದಲೇ ಗೊತ್ತಾಗುತ್ತದೆ, ಕೆಲಸ ಜಾಸ್ತಿಯಾಗಿದೆ ಎಂದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅಲ್ಲಿ Official ಸೆಕ್ರೆಟರಿಗಳಿಗೂ, Non-official ಸೆಕ್ರೆಟರಿಗಳಿಗೂ ಆಡಳಿತ ವಿಷಯದಲ್ಲಿ ಜಿಜ್ಞಾಸೆಯುಂಟಾಗಿ confusion ನ್ನಿಗೆ ಅವಕಾಶವಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಎಕ್ಸಿಕ್ಯೂಟಿವ್ ಕಮಿಟಿಯ ಚೇರ್ಮನ್ನರು ಯಾರು ?

Sri A. G. RAMACHANDRA RAO.—The concerned Minister is the Chairman.

Sri Mulka GOVINDA REDDY.—Are the Government aware that an exhibition on similar lines is being held in Bangalore every year ?

Sri A. G. RAMACHANDRA RAO.—I do not know whether it is on similar lines, but an exhibition is being held.

Sri Mulka GOVINDA REDDY.—May I know who is conducting the exhibition, Sir ?

Mr. SPEAKER.—We are not concerned with the Bangalore Exhibition.

ಶ್ರೀ ಪಿ. ಆರ್. ರಾಮಯ್ಯ.—ಈಗ ನಷ್ಟವಾಗುತ್ತಿದೆ ಅಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ ; ಈಚೆಗೆ ನಷ್ಟವಾಗುತ್ತಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಎಷ್ಟು ವರ್ಷಗಳಿಂದ ನಷ್ಟವಾಗುತ್ತಿಲ್ಲ ?

ಶ್ರೀ ಎ. ಜಿ. ರಾಮಚಂದ್ರರಾವ್.—ನನಗೆ ಗೊತ್ತಿರುವ ಹಾಗೆ ಎರಡು ಮೂರು ವರ್ಷಗಳಿಂದ ನಷ್ಟವಾಗುತ್ತಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಈ Expenditure ನ್ನು ಮೈಸೂರು ಸಿಟಿ ಮುನಿಸಿಪಾಲಿಟಿಗೆ ಹಾಕಬೇಕೆಂದು ಸರ್ಕಾರದವರ ಆಲೋಚನೆಯಲ್ಲಿತ್ತೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಎಸ್. ಸಿದ್ದಪ್ಪ.—ಈ ವಸ್ತು ಪ್ರದರ್ಶನದ ಮೆಂಬರುಗಳನ್ನು ನೇಮಿಸುವುದು ವರ್ಷ ವರ್ಷವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮೂರು ವರ್ಷಕ್ಕೊಂದು ಸಾರಿ.

ಶ್ರೀ ಎಸ್. ಸಿದ್ದಪ್ಪ.—ಅದರಲ್ಲಿ ಯಾವ ನೀತಿಯನ್ನನುಸರಿಸುತ್ತೀರಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಗ್ಸಿಬಿಷನ್ನಿನ ಅವಶ್ಯಕತೆ ಮತ್ತು ಸದಸ್ಯರ ಯೋಗ್ಯತೆಗಳನ್ನು ನೋಡಿ ನೇಮಿಸುತ್ತೇವೆ.

ಶ್ರೀ ಎಸ್. ಸಿದ್ದಪ್ಪ.—ಯೋಗ್ಯತೆಯೆಂದರೆ ಅರ್ಥವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೆಲಸವನ್ನು ನಿರ್ವಹಿಸುವ ಶಕ್ತಿ.

Panchayet Elections in Honnudike Village.

Q.—512. **Sri T. N. MUDALAGIRI GOWDA** (Kunigal).—

Will the Government be pleased to state :—

(*a*) when the Panchayet election took place in Honnudike Village, Tumkur Taluk ;

(*b*) whether the D.S.P. had gone there on the day of the election ; if so, why ;

(*c*) the Sub-Inspector who was there on that day ;

(*d*) whether it is a fact that the police failed to give assistance to women to come and cast their votes freely ;

(*e*) the number of women voters and the number who have cast their votes ?

A.—**Sri H. SIDDAVEERAPPA** (Minister for Home and Industries).—

(*a*) 21st January 1955.

(*b*) Yes. As his presence was necessary for maintaining law and order in the village.

(*c*) Sri T. L. Gurulingiah, Sub-Inspector, Hebbur Range Police Station.

(*d*) No.

(*e*) (i) Number of women voters—293.

(ii) Number who have cast their votes—Information is not available as the boxes are under seal.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಡಿಸ್ಟ್ರಿಕ್ಟ್ ಪೋಲೀಸ್ ಸೂಪರ್‌ಇಂಟೆಂಡೆಂಟ್‌ರವರು ಆ ನ್ಪಳಕ್ಕೆ ಹೋಗಿದ್ದುದು Law and orderನ್ನು maintain ಮಾಡುವುದಕ್ಕೆಂದು ಹೇಳಿದ್ದೀರಿ. ಅಲ್ಲಿ ಹೊಡೆದಾಟ ವಾಗಿತ್ತೇ?

*ಶ್ರೀ ಎಚ್. ಸಿದ್ದವೀರಪ್ಪ.—ಹೊಡೆದಾಟವಾಗ ಬಹುದೆಂದು ವರದಿ ಬಂತು. ಬಂದ ಕೂಡಲೆ ಹೋದರು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹೊಡೆದಾಟ ವಾಗಬಹುದೆಂದು ರಿಪೋರ್ಟ್ ಬಂದಿತ್ತು ಎಂದರೆ ವೋಟರುಗಳು ತಮ್ಮ ವೋಟನ್ನು ಕೊಡುವುದಕ್ಕೆ ಸರಿಯಾದ ವ್ಯವಸ್ಥೆಮಾಡಿರಲಿಲ್ಲವೆಂದು ತಿಳಿದುಕೊಳ್ಳೋಣವೇ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗಲ್ಲ; ಬಹಳ ಜಿದ್ದಾಜಿದ್ದಿನಿಂದ, ಖಡಾಖಡಿಯಿಂದ ಚುನಾವಣೆ ನಡೆಯುತ್ತಿತ್ತು. ಕೈಕೈ ಮಿಲಾಯಿಸಿ ಗಲಾಟೆಯಾಗುವ ಪರಿಸ್ಥಿತಿಯುದ್ದುದರಿಂದ ಹೋದರು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಅಲ್ಲಿ ಪೋಲೀಸಿನವರು, ದಫೇದಾರರು, ಇನ್‌ಸ್ಪೆಕ್ಟರುಗಳು ಇದ್ದರೇ ಇಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಸಬ್ ಇನ್‌ಸ್ಪೆಕ್ಟರು, ದಫೇದಾರರು ಮತ್ತು ಆರು ಜನ ಕಾನ್‌ಸ್ಟೇಬಲ್‌ಗಳಿದ್ದರು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಕೈಕೈಮಿಲಾಯಿಸುವ ಸ್ಥಿತಿಯಲ್ಲಿತ್ತೆಂದು ಹೇಳಿದಿರಿ. ಹಾಗಾಗಿದ್ದರೆ ಅವರಿಂದ ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತಿರಲಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಕಷ್ಟವಾಗುತ್ತದೆಂದು ಹೇಳಿ ರಿಸರ್ವ್ ಪೋಲೀಸ್ ಕಳುಹಿಸಬೇಕೆಂದು ರಿಪೋರ್ಟ್ ಬಂದಿತ್ತು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇದರಿಂದ ಚುನಾವಣೆಯಲ್ಲಿ freeಯಾಗಿ ವೋಟನ್ನು ಚಲಾಯಿಸಲು ಸಾಧ್ಯವಿರಲಿಲ್ಲವೆಂದು ಅರ್ಥವಾಗುವುದಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗೆ ಹೇಳುವುದಕ್ಕಾಗುವುದಿಲ್ಲ. ರಿಸರ್ವ್ ಪೋಲೀಸ್ ಹೋದ ಮೇಲೆ Returning ಆಫೀಸರನ್ನು ಕೇಳಿದ್ದೇವೆ. ಸರಿಯಾದ ವ್ಯವಸ್ಥೆಯಿತ್ತು, ಜನರು ಕ್ಯೂನಲ್ಲಿ ನಿಂತಿದ್ದರು ಎಂದು ರಿಪೋರ್ಟ್ ಬಂದಿದೆ. ಎಂಟು ಘಂಟೆಯವರೆಗೂ ಶಾಂತ ರೀತಿಯಿಂದ ಚುನಾವಣೆಯನ್ನು ನಡೆಸಿದ್ದಾರೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಡಿ.ಎಸ್.ಪಿ. ಯವರು ಹೋಗುವ ಹೊತ್ತಿಗೆ ಹೆಂಗನರು ವೋಟು ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೊರಟು ಹೋಗಿದ್ದುದು ನಿಜವೇ?

ಶ್ರೀ ಎಚ್. ಸಿದ್ದವೀರಪ್ಪ.—ಅವರು ಕಳುಹಿಸಿರುವ ರಿಪೋರ್ಟಿನಲ್ಲಿ, 'ನಾನು ಹೋದಾಗಲೂ ಅಲ್ಲಿ ಜನರು ಕ್ಯೂನಲ್ಲಿ ನಿಂತಿದ್ದರು, ಅವರಲ್ಲಿ ಕೆಲವರು ಮಹಿಳೆಯರೂ ಇದ್ದರು' ಎಂದು ತಿಳಿಸಿದ್ದಾರೆ.

ಶ್ರೀ ಎಸ್. ಸಿದ್ದಪ್ಪ.—ಮೊದಲೇ ಅವರು ಪೋಲೀಸ್ ಭದ್ರತೆಬೇಕೆಂದು ಸರ್ಕಾರಕ್ಕೆ ತಿಳಿಸಿದ್ದರೆ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

Atchkat under Visveswaraya Canal.

Q.—131. Sri B. P. NAGARAJA MURTHY (Malavalli).—

Will the Government be pleased to state :—

(*a*) the proposed extent of irrigation under Visveswaraya Canal according to the original plan ;

(*b*) the extent that has been brought under irrigation so far;

(*c*) whether Boppagowdanapura Hobli, Malavalli Taluk is included in the irrigable area according to the original plan of Visvesvaraya Canal ;

(*d*) whether they have implemented the plan in Boppagowdanapura Hobli, Malavalli Taluk ;

(*e*) if not, when do they implement it ?

A.—Sri Kadidal MANJAPPA (Minister for Revenue and Public Works).—

(*a*) 120,000 acres.

(*b*) About 110,000 acres.

(*c*) No.

(*d*) and (*e*) Do not arise in view of reply to (*c*).

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಇದರ original ಪ್ಲಾನು ಸರ್ಕಾರದವರ ವಶದಲ್ಲದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಹೋದಸಾರಿ, ಕಪಿನಿ ಪ್ರಾಜೆಕ್ಟ್ ಆದಮೇಲೆ ಇರಿಗೇಷನ್ನನ್ನು ಈ ಹೋಬಳಿಯಲ್ಲಿ develop ಮಾಡುವುದನ್ನ ಯೋಚನೆ ಮಾಡುತ್ತೇವೆಂದು ಹೇಳಲಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಯೋಚನೆ ಮಾಡುತ್ತೇವೆಂದು ಹೇಳಿದ್ದೆವು.

ಶ್ರೀ ಬಿ. ಪಿ. ನಾಗರಾಜಮೂರ್ತಿ.—ಆ ಪ್ಲಾನನ್ನು ತೋರಿಸುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ತೋರಿಸುತ್ತೇವೆ.

Bridge across Gundi Halla.

Q,—202. Sri G. BASAPPA (Hosadurga).—

Will the Government be pleased to state :

(*a*) whether it was not brought to their notice on the floor of the Assembly the necessity and urgency of constructing a bridge across Gundi Halla in the 19th mile of Hiriyur-Hosadurga Road ;

(*b*) the action taken in the matter?